ನರಸಿಂಹಸ್ವಾಮಿ' ಮತ್ತು ಸಾಹಿತ್ಯ ಚರಿತ್ರೆಯ ಭಾಗಗಳು ಮುಖ್ಯ. ಕೊನೆಗಾಲದಲ್ಲಿ ಅವನು ಭೈರಪ್ಪನವರ ಬಗ್ಗೆ ತಳೆದ ಆಸಕ್ತಿಯೂ ವಿಶಿಷ್ಟ. 'ಕಾರ್ಕೋಟಕ', 'ಗಾಳಿ ಮತ್ತು ದುಂಬಿ', 'ಸ್ಥಿತಪ್ರಜ್ಞ' ಮುಂತಾದ ಕಥಾಸಂಗ್ರಹಗಳಿಗಿಂತ ಅವನು ಮಕ್ಕಳಿಗಾಗಿ ಬರೆದ ಪುಸ್ತಕ ಮಹತ್ವದುವು. ಅವನು ಆಸ್ಟ್ರೇಲಿಯಾದಲ್ಲಿದ್ದ ತನ್ನ ಮೊಮ್ಮಗಳ ಸಲುವಾಗಿ ಬರೆದ ಮಕ್ಕಳ ಕವಿತೆಗಳಂತೂ ಬಾಲಸಾಹಿತ್ಯ ಕ್ಷೇತ್ರಕ್ಕೆ ನಾಡಿಗ ಕೊಟ್ಟ ಮಹತ್ವದ ಕಾಣಿಕೆಗಳು. ಪರದೇಶಗಳಲ್ಲಿರುವ ಮಕ್ಕಳು ಆ ದೇಶದ ಭಾಷೆಗಳ, ಜನರ, ಮಕ್ಕಳ ಸಂಪರ್ಕದಲ್ಲಿ ನಮ್ಮ ಮಾತೃಭಾಷೆಯನ್ನು, ಕನ್ನಡವನ್ನು ಮರೆಯದಿರಲಿ ಎಂದು, ನಾಟಕೀಯವಾಗಿ, ಕುಣಿದಾಡುತ್ತ, ಕೆಲವು ಸಲ ಅರ್ಥರಹಿತವೆಂದು ಕಂಡರೂ ಕನ್ನಡವಾಗಿರುವ ಹಾಡುಗವನಗಳನ್ನು ರಚಿಸಿ ಹಾಡುತ್ತಿದ್ದ. ಅವನು ಅತ್ಯಂತ ಉತ್ಸಾಹದಿಂದ, ಕುಣಿಕುಣಿದಾಡುತ್ತ ಮಕ್ಕಳ ಗೀತಗಳನ್ನು ವಾಚಿಸುವ ರೀತಿ ಅನುಪಮವಾಗಿತ್ತು.

ಒಬ್ಬ ಗಂಭೀರ ವಿಮರ್ಶಕ, ಲೇಖಕ ಇಷ್ಟು ಯಶಸ್ವಿಯಾಗಿ ಹೀಗೆ ಮಕ್ಕಳಸಾಹಿತ್ಯ ರಚಿಸಿದ್ದು ಜಿ.ಪಿ. ರಾಜರತ್ನಂ ನಂತರ ಗಣನೀಯವಾದುದು. ಶಿಶುಸಾಹಿತ್ಯ ಕ್ಷೇತ್ರದಲ್ಲಿ ನಾಡಿಗನ ಕ್ರಿಯಾಶೀಲ ಚಟುವಟಿಕೆಯನ್ನು ಅಲ್ಲಗಳೆಯಲಾಗದು. ಮಕ್ಕಳಿಗಾಗಿ ಬರೆದ 'ಹನ್ನೊಂದು ಹಂಸಗಳು', 'ಗಾಳಿಪಟ', 'ಗೂಬೆಯ ಕಥೆ', 'ಡಿಡಿಲಕ್ ಡಿಡಿಲಕ್', 'ಧ್ರುವ ಮತ್ತು ಪ್ರಹ್ಲಾದ', 'ಡಕ್ಕಣಕ್ಕ ಡಕ್ಕಣ', 'ಮನುಷ್ಯನಿಗೆ ಬಾಲ', 'ಆನೆ ಮತ್ತು ಇರುವೆ' ಮುಂತಾದುವು ಮಹತ್ವದ ಬಾಲಕೃತಿಗಳು. ಕನ್ನಡ ಬರಹಲೋಕ ಮತ್ತು ವ್ಯಾಕರಣ ಕ್ಷೇತ್ರಕ್ಕೆ ಸಹ ನಾಡಿಗ ನೀಡಿದ ಕೊಡುಗೆ ಮಹತ್ವದ್ದು. ಇವು ಕನ್ನಡ ಅಧ್ಯಾಪಕರನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾಡಿಗನಂಥ ಇಂಗ್ಲಿಷ್ ಅಧ್ಯಾಪಕನೊಬ್ಬ ಬರೆದ ಪ್ರಾಯೋಗಿಕ ಪುಸ್ತಕಗಳು. ಸಾಹಿತ್ಯ ಅಕಾದೆಮಿ ಮತ್ತು ಇತರರಿಗೆ ಬರೆದುಕೊಟ್ಟ, ಸಂಪಾದಿಸಿಕೊಟ್ಟ ಅವನ ಪುಸ್ತಕಗಳು ಸಹ ಮುಖ್ಯವಾದುವು.

***

ಮಾಲತಿ-ಸುಮತೀಂದ್ರ ನಾಡಿಗರ ಮದುವೆಯಾಗಿದ್ದು 1962ರ ನವಂಬರ್ 2. ತಮ್ಮ ಮದುವೆಗೆ 25 ವರ್ಷ ತುಂಬಿದಾಗ ಸುಮತಿ 'ದಾಂಪತ್ಯಗೀತ' ನೀಡಿದ್ದ; ಈಗ ನಾಡಿಗ 70ನೇ ವರ್ಷಕ್ಕೆ ಕಾಲಿಟ್ಟಾಗ (1935 ಮೇ 4) ಸುಮತಿಗೆ ತಾನೂ ಒಂದು ಕೃತಿಕಾಣಿಕೆ ಕೊಡಬೇಕು ಎಂದು ಮಾಲತಿ ಬಯಸಿದ್ದಳು. ಈ ನೆನಪಿಗಾಗಿ ಬೆಂಗಳೂರಿನ ಸುರಾನಾ ಕಾಲೇಜಿನಲ್ಲಿ ಒಂದು ವಿರಳ ಕಾರ್ಯಕ್ರಮವನ್ನು ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಕೆ.ಇ. ರಾಧಾಕೃಷ್ಣ, ಸಪ್ನ ಮಿತ್ರರು ಮತ್ತು ಮಾಲತಿ ನಾಡಿಗರ ಆತ್ಮೀಯರು ಸೇರಿ ಆಯೋಜಿಸಿದ್ದರು (2004 ಆಗಸ್ಟ್ 21). ನಾಡಿಗನ ಮಹತ್ವದ ಕಾವ್ಯಕೃತಿಗಳಾದ 'ದಾಂಪತ್ಯಗೀತ' ಮತ್ತು 'ಪಂಚಭೂತಗಳು' ಕುರಿತು ಒಂದು ವಿಮರ್ಶಾಕೃತಿ ತರುವುದು ಸೂಕ್ತ ಎಂದು ಮಾಲತಿ ಭಾವಿಸಿದ್ದಳು. ಆ ನಿಟ್ಟಿನಲ್ಲಿ ಶ್ರಮಿಸಿ, ಅನೇಕ ಲೇಖಕರಿಂದ ಬರೆಸಿದ ಮಹತ್ವದ 60 ಲೇಖನಗಳನ್ನು, 'ಸುಮತೀಂದ್ರ ನಾಡಿಗರ ಕಾವ್ಯ' ಹೆಸರಿನಲ್ಲಿ ಸಂಪಾದಿಸಿದ ಸಂಗ್ರಹವನ್ನು ಆ ದಿವಸ ಬಿಡುಗಡಿಸಿದಳು. ಅದರ ಅಂಗವಾಗಿ ಒಂದು ಉತ್ತಮ ವಿಚಾರ ಸಂಕಿರಣವನ್ನೂ ಹಮ್ಮಿಕೊಳ್ಳಲಾಗಿತ್ತು. ಇದೇ ಕೃತಿ ಪರಿಷ್ಕೃತವಾಗಿ 'ನಾಡಿಗರ ಕಾವ್ಯ ಜಗತ್ತು' ಹೆಸರಿನಿಂದ ಮತ್ತೆ ಪ್ರಕಟವಾಗಿದೆ (2010).

***

ಧಾರವಾಡದ ಬೇಂದ್ರೆ ಭವನದಲ್ಲಿ ಮೂರು ದಿನದ ಕಾವ್ಯ ಕಮ್ಮಟ ನಡೆಸಲು ನಿರ್ಧರಿಸಲಾಗಿತ್ತು. (2006 ಏಪ್ರಿಲ್ 14ರಿಂದ 16) ಅದಕ್ಕೆ ನಾಡಿಗನೇ ಸೂಕ್ತ ನಿರ್ದೇಶಕ ಎಂದು ಸೂಚಿಸಿದ್ದೆ. ಕಮ್ಮಟಕ್ಕೆ 15-20 ಆಸಕ್ತ ಕವಿಗಳನ್ನು ಆಯ್ದುಕೊಳ್ಳಲಾಗಿತ್ತು. ಆ ಹೊಸ ಕವಿಗಳು ಬರೆದ ಕವಿತೆಗಳನ್ನು ಮೊದಲೇ ತರಿಸಿಕೊಂಡು ಅವುಗಳನ್ನು ನಾಡಿಗನಿಗೆ ಕೊಡಲಾಗಿತ್ತು. ಅವನ್ನು ಓದಿ ನಾಡಿಗ ಯಥಾರೀತಿ ತನ್ನ ಪದ್ಧತಿಯಲ್ಲಿ ತಿದ್ದುಪಡಿಗಳನ್ನೂ ಮಾಡಿ ಇಟ್ಟಿದ್ದ. ಹೊಸ ಕವಿಗಳಿಗೆ ನಾಡಿಗನಂಥ ಕವಿ, ವಿಮರ್ಶಕ, ಸಹೃದಯಿಯ ಮಾರ್ಗದರ್ಶನ ಸಿಕ್ಕಿದ್ದು ಕವಿಗಳ ಭಾಗ್ಯವೇ ಆಗಿತ್ತು. ನಾಡಿಗ, ಬೇಂದ್ರೆ ಮತ್ತು ಬೇಂದ್ರೆ ಕಾವ್ಯದ ಕೂಡ ನಡೆಸಿದ ತನ್ನ ಆತ್ಮಸಂಗಾತಗಳನ್ನು ವಿವರಿಸಿದ; ಈಗ ಪಾಲುಗೊಂಡ ಕವಿಗಳ ಕನ್ನಡ ಭಾಷಾ ವ್ಯಾಕರಣ, ಭಾಷಾಶುದ್ಧಿಯನ್ನು ಒಬ್ಬೊಬ್ಬರನ್ನೇ ಕರೆದು ವಿವರಿಸಿದ. ಮೂರೂ ದಿನ ಮೊದಲಲ್ಲಿ ಅವನ ಭಾಷಣ, ನಂತರ ಕವಿಗಳ ಕೂಡ ಪ್ರಶ್ನೋತ್ತರ, ಸಂವಾದ, ಆ ನಂತರ ಅವರವರ ಕವಿತೆಗಳಲ್ಲಿ ತಾನು ಕಂಡ ದೋಷಗಳನ್ನು